ರಾ.ಗಾಂ.ಗ್ರಾ.ವ.ನಿ.ನಿ.
ಬೆಂಗಳೂರು.
9 SEP 2010
ಸ್ವೀಕೃತಿ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಕೈಗೊಂಡ ವಿವಿಧ ವಸತಿ/ ನಿವೇಶನ ಯೋಜನೆಗಳಡಿಯಲ್ಲಿ ಸುಳ್ಳು ದಾಖಲೆ ನೀಡುವುದು, ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಅನುದಾನವನ್ನು ದುರುಪಯೋಗ ಮುಂದಾದವುಗಳನ್ನು ತಡೆಹಿಡಿಯವ ಬಗ್ಗೆ.

***

ಓದಲಾಗಿದೆ: 1) ಸರ್ಕಾರದ ಸುತ್ತೋಲೆ ಸಂಖ್ಯೆ: ವಇ 74 ಹೆಚ್‌ಎವೈ 2004, ದಿನಾಂಕ 20-11-2004.
2) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಪತ್ರ ಸಂಖ್ಯೆ: ಎಂಡಿ/ಆರ್‌ಜಿಆರ್‌ಹೆಚ್ ಸಿಎಲ್/ 01/ಜಿಇಎನ್/48/2002/10463.

**ಪ್ರಸ್ತಾವನೆ:**

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿನ ಜನರಿಗೆ ನಿವೇಶನ/ ವಸತಿ ಸೌಲಭ್ಯ ನೀಡುವುದಕ್ಕಾಗಿ ಮೇಲೆ (1)ರಲ್ಲಿ ಓದಲಾದ ಸುತ್ತೋಲೆಯಲ್ಲಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಫಲಾನುಭವಿಗಳು ನಿಯಮಾನುಸಾರ ಮನೆಗಳನ್ನು ನಿರ್ಮಿಸಿಕೊಳ್ಳದೆ ಹಳೆ ಮನೆಗಳ ಅಥವಾ ಬೇರೊಂದು ಮನೆಯ ಛಾಯಾ ಚಿತ್ರಗಳನ್ನು ನೀಡಿ, ಛಾಯಾ ಚಿತ್ರಗಳನ್ನು ತಾಂತ್ರಿಕವಾಗಿ ಬದಲಾಯಿಸಿ ಚೆಕ್ಕುಗಳನ್ನು ನೀಡುತ್ತಿರುವುದು ಹಾಗೂ ಕೆಲವೆಡೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಸಹ ಶಾಮೀಲಾಗಿ ಸುಳ್ಳು ದಾಖಲೆಗಳ ಆಧಾರದ ಮೇಲೆ ಅನುದಾನವನ್ನು ವಿತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ರಾಜ್ಯದ ಬೊಕ್ಕಸಕ್ಕೆ ಹಾನಿಯುಂಟಾಗುತ್ತಿದೆ ಹಾಗೂ ಯೋಜನೆಗಳ ನಿಗದಿತ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಇಂತಹ ದಂಡನಾರ್ಹ ಅಪರಾಧಿಗಳಿಗೆ ನಿಯಮಾವಳಿಗಳ ಮೇರೆಗೆ ಮೊಕದ್ದಮೆ ಹೂಡಿ ಶಿಸ್ತಿನ ಕ್ರಮ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ. ಅಂತೆಯೇ ಈ ಕೆಳಗಿನಂತೆ ಆದೇಶವನ್ನು ಪ್ರಸ್ತಾಪಿಸಲಾಗಿದೆ.

**ಸರ್ಕಾರದ ಆದೇಶ ಸಂ: ವಇ 23 ಹೆಚ್‌ಎವೈ 09, ಬೆಂಗಳೂರು, ದಿನಾಂಕ 8ನೇ ಸೆಪ್ಟೆಂಬರ್ 2010.**

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ/ ನಿವೇಶನಗಳ ಯೋಜನೆಗಳಡಿಯಲ್ಲಿ ಫಲಾನುಭವಿಗಳು ನಿಯಮಾನುಸಾರ ತಮ್ಮ ಮನೆ ನಿರ್ಮಿಸಿಕೊಳ್ಳದೆ ಸುಳ್ಳು ದಾಖಲೆ ನೀಡಿ ಅಥವಾ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅನುದಾನವನ್ನು ಪಡೆದುಕೊಂಡಲ್ಲಿ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಸುಳ್ಳು ದಾಖಲೆಗಳ ಮೇರೆಗೆ ಅನುದಾನ ವಿತರಿಸಿರುವುದು ಕಂಡುಬಂದಲ್ಲಿ ಅವರು ಕಾನೂನು ರೀತ್ಯಾ ದಂಡನಾ ಕ್ರಮಗಳಿಗೆ ಗುರಿಯಾಗಲು ಹೊಣೆಗಾರರಾಗುವುದು ಅಲ್ಲದೆ ಅವರುಗಳ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿ ಕ್ರಮ ಕೈಗೊಳ್ಳಬಹುದು.

2. ಮುಂದುವರಿದು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ/ ನಿವೇಶನಗಳ ಯೋಜನೆಗಳಡಿಯಲ್ಲಿ ಸೂಚಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಮತ್ತು ಸಂಬಂಧಿಸಿದ ನಿಯಮಗಳನ್ನು ಅನುಸರಿಸದೇ ಸುಳ್ಳು ವರದಿ ಸಲ್ಲಿಸುವುದು, ಅನರ್ಹ ಫಲಾನುಭವಿಗಳ ಆಯ್ಕೆ ಮಾಡುವುದು, ಫಲಾನುಭವಿಗಳು ಮನೆಗಳನ್ನು ನಿರ್ಮಿಸಿಕೊಳ್ಳದಿದ್ದರೂ ಅನುದಾನ ಬಿಡುಗಡೆಗೊಳಿಸುವುದು, ಸುಳ್ಳು ದಾಖಲೆ/ನಕಲಿ ದಾಖಲೆಗಳ ಮೇಲೆ ಅನುದಾನ ಬಿಡುಗಡೆಗೊಳಿಸುವುದು, ಅನುದಾನ ದುರುಪಯೋಗ ಪಡಿಸಿಕೊಳ್ಳುವುದು, ಅನುದಾನವನ್ನು ಯೋಜನೇತರ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು, ಇತ್ಯಾದಿಗಳೊಂದಿಗೆ ಇನ್ನು ಇತರೆ ಅಂಶಗಳು ಕಂಡುಬಂದಲ್ಲಿ ಅಂತಹ ಎಲ್ಲ ಉಲ್ಲಂಘನೆ/ ಲೋಪಗಳಿಗೆ ಸಂಬಂಧಪಟ್ಟ ಗ್ರಾಮಪಂಚಾಯತಿಯ ಕಾರ್ಯದರ್ಶಿಗಳು, ಸದಸ್ಯರು ಹಾಗೂ ಅಧ್ಯಕ್ಷರುಗಳು ಕಾನೂನು ರೀತ್ಯಾ ದಂಡನಾ

2....

C. 13497

N.I. 9-9-10 AMM-PR

ಕ್ರಮಗಳಿಗೆ ಗುರಿಯಾಗಲು ಹೊಣೆಗಾರರಾಗುವುದಲ್ಲದೆ ನಿಯಮಾವಳಿಗಳ ಪ್ರಕಾರ ಅವರುಗಳ ಮೇಲೆ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿ ಕ್ರಮ ಕೈಗೊಳ್ಳುವುದರೊಂದಿಗೆ ಗ್ರಾಮಪಂಚಾಯಿತಿಯ ಸಂಬಂಧಪಟ್ಟ ಸದಸ್ಯರುಗಳ ಸದಸ್ಯತ್ವವನ್ನು ವಜಾಗೊಳಿಸಲು (supersede) ಸಹ ಕ್ರಮ ಜರುಗಿಸಬಹುದಾಗಿದೆ.

3. ಈ ಆದೇಶವನ್ನು ಕಾನೂನು ಇಲಾಖೆಯ ಟಿಪ್ಪಣಿ ಸಂ. ಲಾ/82/ಟಿ/ಓಪಿಎನ್/2010, ದಿನಾಂಕ 19.8.2010ರಲ್ಲಿ ಸಹಮತಿಸಿದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

Kwallur 8/09

(ಕೆ.ಆರ್. ವಲ್ಲೂರ)
ಪೀಠಾಧಿಕಾರಿ-2, ವಸತಿ ಇಲಾಖೆ.

1. ಮಹಾಲೇಖಪಾಲರು, (ಎ&ಇ), (ಲೆಕ್ಕಪತ್ರ, 1&2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬಂಡಿಮಟ್ಟ, ಕೆಂಗೇರಿ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು,
5. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು
7. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.